# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5722-2008

**ಚಾಸಾ-10 ಪ್ರಾಸಾ-2**

| | |
|---|---|
| ಸಾಕ್ಷಿದಾರರ ಹೆಸರು | ಶ್ರೀನಾಥ ಹೊಸಕೆರೆ |
| ತಂದೆಯ ಹೆಸರು | ಹೊಸಕೆರೆ ಶ್ರೀಕಂಠಯ್ಯ |
| ವಯಸ್ಸು | 75 ವರ್ಷ |
| ಉದ್ಯೋಗ | ನಿವೃತ್ತ ನೌಕರ |
| ವಾಸ | ಬಸವೇಶ್ವರ ನಗರ, ಬೆಂಗಳೂರು |
| ಪ್ರಮಾಣೀಕರಿಸಿದ ದಿನಾಂಕ | 11/07/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಎ.ಎಸ್. ಕಾರ್ಗೋ ಕಂಪನಿಯಲ್ಲಿ 2005 ರಿಂದ 2013 ರವರೆಗೆ ಜನರಲ್ ಮ್ಯಾನೇಜರ್ ಕೆಲಸ ಮಾಡಿರುತ್ತೇನೆ. ಸದರಿ ಕಛೇರಿಯು ಯುನಿಟಿ ಬಿಲ್ಡಿಂಗ್ ನಲ್ಲಿ ಇರುತ್ತದೆ. ನಿಪಿ-2(ಬಿ) ಸಹಿಯನ್ನು ನಮ್ಮ ಯುನಿಟಿ ಬಿಲ್ಡಿಂಗ್ ನಲ್ಲಿರುವ ನಮ್ಮ ಕಛೇರಿಯಲ್ಲಿ ಮಾಡಿರುತ್ತೇನೆ. ನಿಪಿ-2 ಪಂಚನಾಮೆಯನ್ನು ಮಾಡಲು ಪೊಲೀಸರು ನಮ್ಮ ಕಛೇರಿಗೆ ಬಂದಿದ್ದರು, ಪೊಲೀಸರು ಆರೋಪಿ ಸಾಧನಾ ರವರು ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ಪರಿಶೀಲನೆ ಮಾಡಿ, ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಮ್ಮಗಳ ಸಹಿಗಳನ್ನು ಪಡೆದಿರುತ್ತಾರೆ. 2006 ರಲ್ಲಿ ಸಂಜೆಯ ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ, ನಿರ್ದಿಷ್ಟ ದಿನಾಂಕ ನೆನಪಿಲ್ಲ. ನನ್ನೊಂದಿಗೆ ಫಿರ್ಯಾದಿ ಅಬ್ದುಲ್

ರೆಹಮಾನ ರವರು ಸಹ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಫಿರ್ಯಾದಿದಾರರಿಗೆ ಪಿ.ಎ. ಆಗಿ ಕೆಲಸ ಮಾಡುತ್ತಿದ್ದರು.

**ಪಾಟೀ ಸವಾಲು : ಶ್ರೀ. ಸಿ.ಎನ್.ಡಿ. ವಕೀಲರಿಂದ ಃ**

2. ನನ್ನ ಕೊಠಡಿ ಮೊದಲನೇ ಮಹಡಿಯಲ್ಲಿತ್ತು. ಆರೋಪಿಯು ಸಹ ಮೊದಲನೇ ಮಹಡಿಯ ಕೊಠಡಿಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಕಛೇರಿಯಲ್ಲಿ ಸುಮಾರು 15 ಜನರು ಕೆಲಸ ಮಾಡುತ್ತಿದ್ದರು. ಪೊಲೀಸರು ಪಂಚನಾಮೆಗೆ ಸಹಕರಿಸಬೇಕೆಂದು ನನಗೆ ಲಿಖಿತವಾದ ನೋಟಿಸ್ ಕೊಟ್ಟಿರುವುದಿಲ್ಲ. ಚಾಸ-12 ಶ್ರೀಕಾಂತ ರವರು ಮೊದಲನೇ ಮಹಡಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ಈ ಕೇಸಿನ ಫಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾಗಿದ್ದರು ಎಂದರೆ ಸರಿ.

3. ಮಹಜರ್ ಮಾಡುವ ಕಾಲಕ್ಕೆ ಎಷ್ಟು ಜನ ಪೊಲೀಸರು ಬಂದಿದ್ದರು ಮತ್ತು ಅವರ ಹೆಸರುಗಳು ಏನು ಎಂದು ನನಗೆ ನೆನಪಿಲ್ಲ. ನಿಪಿ-2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆಎಂದರೆ ಸರಿಯಲ್ಲ. ಪಂಚನಾಮೆಯನ್ನು ಬರೆದವರ ಹೆಸರು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡದಿದ್ದರೂ ಸಹ ಚಾಸ-1 ರವರು ನಮ್ಮ ಮೇಲಾಧಿಕಾರಿಯಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**